ದೂರವಾಣಿ : 080-2976 2005, 2976 2006
ವೆಬ್‌ಸೈಟ್ : www.kanakapura.tpa.gov.in
E-mail : kkpaplan@gmail.com

# ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಕಯೋಪ್ರಾ/ಪ್ರಾಪ್ರಪತ್ರ/61/2023–24 ದಿನಾಂಕ: 22 FEB 2024

## ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15(1) ರನ್ವಯ)
(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳು 1965 ನಿಯಮ 30 ನಮೂನೆ 3ರನ್ವಯ)

**ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮದ ಸ.ನಂ. 174/4, 174/5 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 3ಎ-11ಗುಂ ಅನುಮೋದಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಕಗ್ಗಲೀಪುರ ಗ್ರಾಮ ಪಂಚಾಯಿತಿ ಖಾತಾ ಸಂಖ್ಯೆ: 1847/174/4 174/5 174/6 174/7 174/8 175 (ಇ-ಖಾತಾ ಸಂಖ್ಯೆ : 150200300100236037) ರಲ್ಲಿ ವಸತಿ ಸಮುಚ್ಛಯ ಕಟ್ಟಡ ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.**

ಉಲ್ಲೇಖ: 1. ನಿಮ್ಮ ಮನವಿ ಪತ್ರ ದಿನಾಂಕ: 29.12.2023 ಮತ್ತು 19.01.2024
2. ಈ ಕಛೇರಿ ಪತ್ರ ಸಂಖ್ಯೆ: ಕಯೋಪ್ರಾ/ಎಲ್‌ಎಓ/67/2023–24 ದಿನಾಂಕ:19.12.2023.
3. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ದಿನಾಂಕ: 22.02.2024.

*********

ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರಾದ ಶ್ರೀ ಜೆ.ಭೂಪೇಶ್ ರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರು, ಮೆ॥ ಬ್ರೆನ್ ಕಾರ್ಪೋರೇಷನ್ ಪ್ರೈ.ಲಿ. (ರಿಜಿಸ್ಟ್ರೆಡ್ ಜಿ.ಪಿ.ಎ. ಹೋಲ್ಡರ್) ಇವರು ಉಲ್ಲೇಖ(1)ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮದ ಸ.ನಂ. 174/4, 174/5 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 3ಎ-11ಗುಂ ಅನುಮೋದಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಕಗ್ಗಲೀಪುರ ಗ್ರಾಮ ಪಂಚಾಯಿತಿ **ಖಾತಾ ಸಂಖ್ಯೆ: 1847/174/4 174/5 174/6 174/7 174/8 175 (ಇ-ಖಾತಾ ಸಂಖ್ಯೆ : 150200300100236037)** ರಲ್ಲಿ ವಸತಿ ಸಮುಚ್ಛಯ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ. ಪ್ರಸ್ತಾವಿತ ಜಮೀನಿಗೆ ಪ್ರಾಧಿಕಾರದಿಂದ ಈಗಾಗಲೇ ಉಲ್ಲೇಖ (2) ರಲ್ಲಿ ವಸತಿ ಉದ್ದೇಶದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಿನ್ಯಾಸದಲ್ಲಿ ವಸತಿ ಸಮುಚ್ಛಯ ಕಟ್ಟಡ ಕಟ್ಟಲು ನಿರ್ಮಿಸುವ ಸಂಬಂಧ ಉಲ್ಲೇಖ(3)ರಲ್ಲಿ ಈ ಕಛೇರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ. ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1) ರನ್ವಯ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮದ ಸ.ನಂ. 174/4, 174/5 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 3ಎ-11ಗುಂ ಅನುಮೋದಿತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಕಗ್ಗಲೀಪುರ ಗ್ರಾಮ ಪಂಚಾಯಿತಿ **ಖಾತಾ ಸಂಖ್ಯೆ: 1847/174/4 174/5 174/6 174/7 174/8 175 (ಇ-ಖಾತಾ ಸಂಖ್ಯೆ : 150200300100236037)**ರ ನಿವೇಶನದಲ್ಲಿ ವಸತಿ ಸಮುಚ್ಛಯ ಕಟ್ಟಡ ಕಟ್ಟಲು ಅರ್ಜಿದಾರರಾದ **ಶ್ರೀ ಜೆ.ಭೂಪೇಶ್ ರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರು, ಮೆ॥ ಬ್ರೆನ್ ಕಾರ್ಪೋರೇಷನ್ ಪ್ರೈ.ಲಿ. (ರಿಜಿಸ್ಟ್ರೆಡ್ ಜಿ.ಪಿ.ಎ. ಹೋಲ್ಡರ್)** ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

### –:ಷರತ್ತುಗಳು:–

1. ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಸತಿ ಸಮುಚ್ಛಯ ಕಟ್ಟಡ ಕಟ್ಟಲು ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ನಿರ್ಮಿಸತಕ್ಕದ್ದು.

2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಆಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು ಕಗ್ಗಲೀಪುರ ಗ್ರಾಮ ಪಂಚಾಯಿತಿಯಿಂದ ಪಡೆಯದೇ ಅಭಿವೃದ್ಧಿ ಕಾಯ ಕೈಗೊಳ್ಳಬಾರದು.
3. ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ.
4. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿಗಳು ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಗಳಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯು ಈ ಕಛೇರಿಯ ಪೂರ್ವಾನುಮತಿ ಪಡೆಯದೆ ಮಾಡತಕ್ಕದ್ದಲ್ಲ.
5. ಈ ಪ್ರಾರಂಭಿಕ ಪ್ರಮಾಣ ಪತ್ರವು ಅನುಮೋದನೆ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರಿಸಬಾರದು.
6. ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಕಟ್ಟಡ ನಿರ್ಮಾಣಕ್ಕೆ ಮುಂಚೆ ಮಾರ್ಪಾಡಿತ ಕಟ್ಟಡ ನಕ್ಷೆಗೆ ಅನುಮೋದನೆ ಪಡೆದು ಮುಂದುವರೆಸತಕ್ಕದ್ದು.
7. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರೆ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.
8. ಕಟ್ಟಡ ಭದ್ರತೆಯ ಕುರಿತು ನುರಿತ ( Structural Engineer ) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
9. ಪ್ರಸ್ತಾವನೆ ಸಂಬಂಧ ಬೆಸ್ಕಾಂ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ : CEE/BMASZ/SEE(O)/AEE-2/23-24 ದಿನಾಂಕ :08.02.2024 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಜವಾಬ್ದಾರರಾಗತಕ್ಕದ್ದು.
10. ಪ್ರಸ್ಥಾವನೆ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ : PCBID:98880 ದಿನಾಂಕ:12.11.2020 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಜವಾಬ್ದಾರರಾಗತಕ್ಕದ್ದು.
11. ಪ್ರಸ್ತಾವನೆ ಸಂಬಂಧ State Level Environmental Impact Assessment Authority, Karnataka ಇವರ ಪತ್ರ ಸಂಖ್ಯೆ:SEIAA:115:CON:2020. ದಿನಾಂಕ:04.09.2020 ರಲ್ಲಿ ವಿಧಿಸಲಾದ ನಿಬಂಧನೆಗಳಿಗೆ ಜವಾಬ್ದಾರರಾಗತಕ್ಕದ್ದು.
12. ಪ್ರಸ್ತಾವನೆ ಸಂಬಂಧ Karnataka state fire and emergency services ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ : KSFES/GBC(1)/281,Docket No, KSFES/NOC/233/2023 Dated:27.11.2023 ರಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಜವಾಬ್ದಾರರಾಗತಕ್ಕದ್ದು.
13. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
14. ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಬಾರದು, ಈ ಬಗ್ಗೆ ಕಂಡುಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದು ಪಡಿಸಲಾಗುವುದು.
15. ಕಟ್ಟಡ ಜಾಗ ಹೊರತುಪಡಿಸಿ ಉಳಿದ ಸೂಕ್ತ ಪ್ರದೇಶದಲ್ಲಿ ಹಾಲಿ ಇರುವ ಮರಗಳನ್ನು ಉಳಿಸಿಕೊಂಡು ಹೊಸದಾಗಿ ಮರ/ಗಿಡಗಳನ್ನು ಬೆಳೆಸತಕ್ಕದ್ದು.

ದೂರವಾಣಿ : 080-2976 2005, 2976 2006
ವೆಬ್‌ಸೈಟ್ : www.kanakapura.tpa.gov.in
E-mail : kkpaplan@gmail.com

# ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

16. ನಿವೇಶನದ ಅವರಣದೊಳಗೆ ಮಳೆ ನೀರು ಕೊಯ್ಲನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು. ಸೋಲಾರ್ ವಾಟರ್ ಹೀಟರ್‌ನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
17. ಹಾಲಿ ಇರುವ ರಸ್ತೆ/ರಾಜ್ಯ ಹೆದ್ದಾರಿ/ರಾಷ್ಟ್ರೀಯ ಹೆದ್ದಾರಿಯ ಮಧ್ಯಭಾಗದಿಂದ ನಿಯಮಾವಳಿಯಂತೆ ಜಾಗವನ್ನು ಬಿಟ್ಟು ಕಟ್ಟತಕ್ಕದ್ದು ಮತ್ತು ಸಂಪರ್ಕ ರಸ್ತೆಯ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
18. ಪ್ರಸ್ತಾವಿತ ನಿವೇಶನವು ಯಾವುದೇ ಭೂಸ್ವಾಧಿನಕ್ಕೆ ಒಳಪಟ್ಟಿದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
19. ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತಿರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.
20. ಈ ಕಟ್ಟಡ ನಕ್ಷೆ ಮಂಜೂರಾತಿ ಪಡೆಯಲು ನೀವು ತಪ್ಪು ಮಾಹಿತಿ / ದಾಖಲೆಗಳನ್ನು ನೀಡಿರುವುದು ಕಂಡುಬಂದರೆ ಈ ಮಂಜೂರಾತಿ ಆದೇಶವು ಸ್ವಯಂ ರದ್ದಾಗುತ್ತದೆಂದು ತಿಳಿಯತಕ್ಕದ್ದು.
21. ಸರ್ಕಾರವು ನಿಗಧಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಸಂಸ್ಥೆಯವರೇ ಪಾವತಿಸತಕ್ಕದ್ದು.
22. ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ಲಗತ್ತಿಸಿರುವ ಅನುಮೋದಿತ ಕಟ್ಟಡ ನಕ್ಷೆಗಳನ್ನು ಸದರಿ ಗ್ರಾಮ ಪಂಚಾಯಿತಿಗೆ ಸಲ್ಲಿಸಿ, ಪಂಚಾಯಿತಿಯಿಂದ ಪರವಾನಗಿ ಪಡೆಯತಕ್ಕದ್ದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4) ರಂತೆ ಕ್ರಮ ಕೈಗೊಳ್ಳಲಾಗುವುದು.

22/02/2024

ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ-ಕಾರ್ಯದರ್ಶಿ
ಕನಕಪುರ ಯೋಜನಾ ಪ್ರಾಧಿಕಾರ
ಕನಕಪುರ.

**ಇವರಿಗೆ,**

**ಶ್ರೀ ಜೆ.ಭೂಪೇಶ್ ರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರು,**
**ಮೆ॥ ಬ್ರೆನ್ ಕಾರ್ಪೋರೇಷನ್ ಪ್ರೈ.ಲಿ. (ರಿಜಿಸ್ಟ್ರೆಡ್ ಜಿ.ಪಿ.ಎ. ಹೋಲ್ಡರ್),**
**3ನೇ ಮಹಡಿ, ಭಲವಾನ, ಪ್ಲಾಟ್ ನಂ.61,**
**5ನೇ ಎ ಬ್ಲಾಕ್, ಕೋರಮಂಗಲ,**
**ಬೆಂಗಳೂರು – 560095.**